2-72-(52)

**ವಿಧಾನ ಪರಿಷತ್ತು ಸದಸ್ಯರುಗಳಾದ ಶ್ರೀ ಪ್ರಕಾಶ್ ಕೆ. ರಾಠೋಡ್, ಶ್ರೀ ಎಂ. ನಾರಾಯಣಸ್ವಾಮಿ, ಶ್ರೀ ಆರ್. ಪ್ರಸನ್ನ ಕುಮಾರ್ ಮತ್ತು ಶ್ರೀ ಯು.ಬಿ ವೆಂಕಟೇಶ್ ರವರುಗಳು ನಿಯಮ–72ರಡಿಯಲ್ಲಿ ಗಮನ ಸೆಳೆದಿರುವ ವಿಷಯಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಹೇಳಿಕೆ**

**ವಿಷಯ:** ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆಯಾದ ನರೇಗಾ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿರುವ ಬಡ ಕೂಲಿ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ಕೂಲಿಯನ್ನು ಪಾವತಿಸದೇ ಹಾಗೂ ಕೂಲಿ ಕೆಲಸದ ನಿರ್ವಹಣೆಯನ್ನು ಮಾಡಲು ಖರೀದಿ ಮಾಡಿದ ಸಲಕರಣೆಗಳಿಗೆ ಹಣವನ್ನು ಪಾವತಿಸದಿರುವ ಹಾಗೂ ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾದ ಅನುದಾನವು ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡದ ಪರಿಣಾಮ, ರೈತಾಪಿ ಜನರು ಸಂಕಷ್ಟಕ್ಕೆ ಸಿಲುಕಿಕೊಂಡಿರುವ ವಿಷಯದ ಬಗ್ಗೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

*****

1. ಕೇಂದ್ರ ಸರ್ಕಾರದ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ರಾಜ್ಯದಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆ ಏಪ್ರಿಲ್ 01, 2020ರಿಂದ ದಿನಾಂಕ:24–09–2020ರ ವರೆಗೆ ಒಟ್ಟು ರೂ.2335.34 ಕೋಟಿಗಳನ್ನು ಕೂಲಿ ಕಾರ್ಮಿಕರಿಗೆ ಪಾವತಿಸಲಾಗಿದೆ. ಕೂಲಿ ಹಣವನ್ನು ಕೂಲಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡಲಾಗುತ್ತಿದೆ. ಕೂಲಿ ಕಾರ್ಮಿಕರು ಕೆಲಸ ನಿರ್ವಹಿಸಿದ 15 ದಿನಗಳೊಳಗಾಗಿ ಕೂಲಿ ಪಾವತಿಸಲು ಕಟ್ಟುನಿಟ್ಟಿನ ಕ್ರಮವಹಿಸಲಾಗಿದ್ದು, 2020–21ನೇ ಸಾಲಿನಲ್ಲಿ ಶೇ.98.97ರಷ್ಟು ಕೂಲಿಯನ್ನು ಕೆಲಸ ಮಾಡಿದ 15 ದಿನಗಳಲ್ಲಿ ಪಾವತಿಸಲಾಗಿದ್ದು, ಕಳೆದ 5 ವರ್ಷಗಳಿಗೆ ಹೋಲಿಸಿದಲ್ಲಿ ಈ ವರ್ಷ ಸಕಾಲಿಕ ಕೂಲಿ ಪಾವತಿ ಪ್ರಮಾಣವು ಅಧಿಕವಾಗಿರುತ್ತದೆ. ಆದ್ದರಿಂದ ಈ ವರ್ಷ ಕೂಲಿ ಪಾವತಿಯಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.

2. ಕೂಲಿ ಕಾರ್ಮಿಕರು ನಿರ್ವಹಿಸಿದ ಕೆಲಸದ ಪ್ರಮಾಣಕ್ಕೆ ಅನುಗುಣವಾಗಿ ಕೂಲಿ ನೀಡಲಾಗುತ್ತದೆ. 1.03 ಕ್ಯುಬಿಕ್ ಮೀಟರ್‌ನಷ್ಟು ಕೆಲಸ ನಿರ್ವಹಿಸಿದ ಕೂಲಿಕಾರರಿಗೆ ಪ್ರತಿದಿನಕ್ಕೆ ರೂ. 275.00 ಕೂಲಿ ಪಾವತಿಸಲಾಗುತ್ತದೆ. ಕೂಲಿಕಾರರು ಕೆಲಸ ನಿರ್ವಹಿಸಲು ಬಳಸುವ ಸಲಕರಣೆಗಳ ಖರೀದಿ ವೆಚ್ಚವನ್ನು ಪಾವತಿಸಲು ಯೋಜನೆಯ ಮಾರ್ಗಸೂಚಿಗಳಲ್ಲಿ ಅವಕಾಶವಿರುವುದಿಲ್ಲ. ಆದರೆ, ಕೂಲಿಕಾರರು ಬಳಸುವ ಸಲಕರಣೆಗಳನ್ನು ಹರಿತಗೊಳಿಸಲು ಪ್ರತಿ ದಿನದ ಕೂಲಿಯ ಜೊತೆಗೆ ರೂ. 10.00 ಸಲಕರಣೆ ಹರಿತಗೊಳಿಸುವ ವೆಚ್ಚ (ಖುಚಿಡಿಠಿಜಟಿಟಿಂ ಅುಚಿಡಿಂಙ) ಪಾವತಿಸಲಾಗುತ್ತದೆ.

3. 2020–21ನೇ ಸಾಲಿನಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡುತ್ತಿದೆ. ನಿಗದಿತ ಕಾಲಮಿತಿಯೊಳಗೆ ಕೂಲಿ ಪಾವತಿಸಿದ ಕಾರಣದಿಂದಾಗಿ ಯೋಜನೆಯಡಿ ಕೆಲಸ ಮಾಡುವ ಕೂಲಿಕಾರರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡುಬಂದಿರುತ್ತದೆ. ಈ ವರ್ಷ ದಿನಾಂಕ:24–09–2020ರಂದು ಇದ್ದಂತೆ 8.73 ಕೋಟಿ ಮಾನವ ದಿನಗಳ ಉದ್ಯೋಗ ಸೃಜನೆ ಮಾಡಲಾಗಿದ್ದು, ವಾರ್ಷಿಕ ಗುರಿಯ ಶೇ.67.13ರಷ್ಟು ಸಾಧನೆ ಮಾಡಲಾಗಿದೆ. ಕಳೆದ 5 ವರ್ಷಗಳ ಇದೇ ಅವಧಿಯ ವರೆಗಿನ ಉದ್ಯೋಗ ಸೃಜನೆಗೆ ಹೋಲಿಸಿದಲ್ಲಿ ಈ ವರ್ಷ ಅತಿ ಹೆಚ್ಚು ಉದ್ಯೋಗ ಸೃಜನೆ ಮಾಡಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಯೋಜನೆಯಡಿ ಹೆಚ್ಚಿನ ಒತ್ತು ನೀಡಲಾಗಿದೆ. ಬದು ನಿರ್ಮಾಣ, ಕೃಷಿ ಹೊಂಡ ಮತ್ತು ತೆರೆದ ಬಾವಿಗಳ ನಿರ್ಮಾಣ, ತೋಟಗಾರಿಕೆ ಬೆಳೆಗಳಿಗೆ ನೆರವು, ಜಾನುವಾರು ಶೆಡ್ ನಿರ್ಮಾಣಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಈ ವರ್ಷದಲ್ಲಿ ಒಟ್ಟು 1,18,113 ರೈತರ ಜಮೀನುಗಳಲ್ಲಿ ಬದು ನಿರ್ಮಾಣ, 67,405 ಕೃಷಿ ಹೊಂಡಗಳು ಮತ್ತು 67,405 ಜಾನುವಾರು ಶೆಡ್ ನಿರ್ಮಾಣ ಮಾಡಲಾಗಿದೆ. 2020-21ನೇ ಸಾಲಿನ ಒಟ್ಟು ವೆಚ್ಚದ ಶೇ.78.85ರಷ್ಟನ್ನು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಖರ್ಚು ಮಾಡಲಾಗಿದೆ. ಕಳೆದ 5 ವರ್ಷಗಳಲ್ಲಿ ಹೋಲಿಸಿದಲ್ಲಿ ಈ ವರ್ಷದ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಮಾಡಲಾದ ವೆಚ್ಚವು ಅತ್ಯಧಿಕವಾಗಿರುತ್ತದೆ. ಕೃಷಿಕರು ಮತ್ತು ಕೂಲಿ ಕಾರ್ಮಿಕರಿಗೆ ಅತಿ ಹೆಚ್ಚಿನ ನೆರವು ನೀಡುವ ಮೂಲಕ ಅವರುಗಳ ಸಂಕಷ್ಟಕ್ಕೆ ಸ್ಪಂದಿಸಲಾಗಿದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ 2020-21ನೇ ಸಾಲಿಗೆ ಕರ್ನಾಟಕ ರಾಜ್ಯಕ್ಕೆ 6315.79 ಕೋಟಿ ರೂ.ಗಳ ಕಾರ್ಮಿಕ ಆಯವ್ಯಯ ಮಂಜೂರಾಗಿದ್ದು, ಇದರಲ್ಲಿ ರೂ.3575.00 ಕೋಟಿ ರೂ. ಕೂಲಿ ವೆಚ್ಚ ಹಾಗೂ ರೂ.2740.79 ಸಾಮಗ್ರಿ ಮತ್ತು ಆಡಳಿತಾತ್ಮಕ ವೆಚ್ಚವಾಗಿರುತ್ತದೆ. ಭಾರತ ಸರ್ಕಾರವು ಇಲ್ಲಿಯವರೆಗೆ ಕೂಲಿ ವೆಚ್ಚಕ್ಕಾಗಿ 2654.45 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದು, 2653.73 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುತ್ತದೆ. ಸಾಮಗ್ರಿ ವೆಚ್ಚಗಳಿಗಾಗಿ ಭಾರತ ಸರ್ಕಾರವು 739.82 ಕೋಟಿ ರೂ.ಗಳನ್ನು ಮತ್ತು ಕರ್ನಾಟಕ ಸರ್ಕಾರವು 231.81 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುತ್ತದೆ. 2019-20ನೇ ವರ್ಷದ ಅಂತ್ಯಕ್ಕೆ ಪಾವತಿಸಲು ಬಾಕಿ ಇದ್ದ ಕೂಲಿ ಮೊತ್ತ ರೂ.311.54 ಕೋಟಿಗಳನ್ನು 2020-21ನೇ ಸಾಲಿನಲ್ಲಿ ಪಾವತಿಸಲಾಗಿರುತ್ತದೆ. 2020-21ನೇ ಸಾಲಿಗೆ ದಿನಾಂಕ:24-09-2020ರ ವರೆಗೆ ರೂ.2335.34 ಕೋಟಿಗಳನ್ನು ಕೂಲಿ ವೆಚ್ಚವಾಗಿ ಮತ್ತು ರೂ.603.40 ಕೋಟಿಗಳನ್ನು ಸಾಮಗ್ರಿ ವೆಚ್ಚಕ್ಕಾಗಿ ಪಾವತಿಸಲಾಗಿದೆ. 2020-21ನೇ ಸಾಲಿನಲ್ಲಿ ದಿನಾಂಕ:24-09-2020ರಂದು ಇದ್ದಂತೆ ರೂ.64.16 ಕೋಟಿ ಕೂಲಿ ವೆಚ್ಚ ಪಾವತಿಸಲು ಬಾಕಿ ಇರುತ್ತದೆ.

ದಿನಾಂಕ: 24-09-2020ರಂದು ಇದ್ದಂತೆ ಪಾವತಿಗೆ ಬಾಕಿ ಇರುವ ಸಾಮಗ್ರಿ ವೆಚ್ಚ:

2016-17 - ರೂ.34.71 ಕೋಟಿ

2017-18 - ರೂ.55.28 ಕೋಟಿ

2018-19 - ರೂ.111.58 ಕೋಟಿ

2019-20 - ರೂ.345.96 ಕೋಟಿ

2020-21 - ರೂ.487.35 ಕೋಟಿ

ಒಟ್ಟು - ರೂ.1034.88 ಕೋಟಿ

(ಕೆ. ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು